॥ಶ್ರೀಕನಕದಾಸಗುರ್ವಂತರ್ಗತ ಶ್ರೀಮಧ್ವಾಂತರ್ಗತ
ಶ್ರೀಸೀತಾರಾಮಾಭಿನ್ನ ಶ್ರೀಆದಿಕೇಶವಾಯ ನಮಃ ॥

: ಹರಿಭಕ್ತಿಸಾರ :

ಶ್ರೀಯರಸ ಗಾಂಗೇಯನುತ ಕೌಂ-
ತೇಯವಂದಿತಚರಣಕಮಲದ-
ಛಾಯತಾಂಬಕ ರೂಪ ಚಿನ್ಮಯ ದೇವಕೀತನಯ ॥
ರಾಯ ರಘುಕುಲವರ್ಯ ಭೂಸುರ-
ಪ್ರೀಯ ಸುರಪುರನಿಲಯ ಚನ್ನಿಗ-
ರಾಯ ಚತುರೋಪಾಯ ರಕ್ಷಿಸು ನಮ್ಮನನವರತ ॥ ೧ ॥
ದೇವದೇವ ಜಗದ್ಭರಿತ ವಸು-
ದೇವಸುತ ಜಗದೇಕನಾಥ ರ-
ಮಾವಿನೋದಿತ ಸಕಲಸಜ್ಜನವಿನುತ ಗುಣಭರಿತ ।
ಭಾವಜಾರಿಪ್ರಿಯ ನಿರಾಮಯ
ರಾವಣಾಂತಕ ರಘುಕುಲಾನ್ವಯ
ದೇವ ಅಸುರವಿರೋಧಿ ರಕ್ಷಿಸು ನಮ್ಮನನವರತ ॥೨॥
ಅನುಪಮಿತಚಾರಿತ್ರ ಕರುಣಾ-
ವನಧಿ ಭಕ್ತಕುಟುಂಬಿ ಯೋಗೀ -
ಜನಹೃದಯಪರಿಪೂರ್ಣ ನಿತ್ಯಾನಂದ ನಿಗಮನುತ ।
ವನಜನಾಭ ಮುಕುಂದ ಮುರಮ-
ರ್ದನ ಜನಾರ್ದನ ತ್ರೈಜಗತ್ಪಾ-
ವನ ಸುರಾರ್ಚಿತ ದೇವ ರಕ್ಷಿಸು ನಮ್ಮನನವರತ ॥೩॥
ಕಮಲಸಂಭವವಿನುತ ವಾಸವ-
ನಮಿತ ಮಂಗಳಚರಿತ ದುರಿತ-
ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವ ವಿಶ್ವಮಯ ।
ಅಮಿತವಿಕ್ರಮ ಭೀಮ ಸೀತಾ-
ರಮಣ ವಾಸುಕಿಶಯನ ಖಗಪತಿ-
ಗಮನ ಕಂಜಜನಯ್ಯ ರಕ್ಷಿಸು ನಮ್ಮನನವರತ ॥೪॥
ಕ್ಷೀರವಾರಿಧಿಶಯನ ಶಾಂತಾ-

ಕಾರ ವಿವಿಧವಿಚಾರ ಗೋಪೀ-
ಚಾರ ನವನಿತಚೋರ ಚಕ್ರಾಧಾರ ಭವದೂರ ।
ಮಾರಪಿತ ಗುಣಹಾರ ಸರಸಾ-
ಕಾರ ರಿಪುಸಂಹಾರ ತುಂಬುರು-
ನಾರದಪ್ರಿಯ ವರದ ರಕ್ಷಿಸು ನಮ್ಮನನವರತ ॥೫॥
ತಾಮರಸದಳನಯನ ಭಾರ್ಗವ-
ರಾಮ ಹಲಧರರಾಮ ದಶರಥ-
ರಾಮ ಮೇಘಶ್ಯಾಮ ಸದ್ಗಣಧಾಮ ನಿಸ್ಸೀಮ ।
ಸಾಮಗಾನಪ್ರೇಮ  ಕಾಂಚನ-
ದಾಮಧರ ಸುತ್ರಾಮವಿರಚಿತ-
ಕಾಮ ರವಿಕುಲಸೋಮ ರಕ್ಷಿಸು ನಮ್ಮನನವರತ ॥೬॥
ವೇದಗೋಚರ ವೇಣುನಾದವಿ-
ನೋದ ಮಂದರಶೈಲಧರ ಮಧು-
ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ ।
ಯಾದವೇಂದ್ರ ಯಶೋದನಂದನ
ನಾದಬಿಂದುಕಳಾತಿಶಯ ಪ್ರ-
ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತ  ॥೭॥
ಅಕ್ಷಯಾಶ್ರಿತ ಸುಜನಜನ ಸಂ-
ರಕ್ಷಣ ಶ್ರೀವತ್ಸ ಕೌಸ್ತುಭ
ಮೋಕ್ಷದಾಯಕ ಕುಟಿಲದಾನವಶಿಕ್ಷ ಕುಮುದಾಕ್ಷ  ।
ಪಕ್ಷಿವಾಹನ ದೇವಸಂಕುಲ -
ಪಕ್ಷ ಜಗದಧ್ಯಕ್ಷ ವರನಿಟಿ-
ಲಾಕ್ಷಸಖ ಸರ್ವೇಶ ರಕ್ಷಿಸು ನಮ್ಮನನವರತ ॥೮॥
ಚಿತ್ರಕೂಟನಿವಾಸ ವಿಶ್ವಾ-
ಮಿತ್ರಕ್ರತುಸಂರಕ್ಷ  ಶಶಿರವಿ-
ನೇತ್ರ ಭವ್ಯಚರಿತ್ರ ಸದ್ಗುಣಗಾತ್ರ ಸತ್ಪಾತ್ರ ।
ಧಾತ್ರಿಜಾಂತಕ ಕಪಟನಾಟಕ-
ಸೂತ್ರ ಪರಮಪವಿತ್ರ ಫಲ್ಗುಣ-

ಮಿತ್ರ ವಾಕ್ಯವಿಚಿತ್ರ ರಕ್ಷಿಸು ನಮ್ಮನನವರತ ||೯||
ಮಂಗಳಾತ್ಮಕ ದುರಿತತಿಮಿರಪ-
ತಂಗ ಗರುಡತುರಂಗ ರಿಪುಮದ-
ಭಂಗ ಕೀರ್ತಿತುರಂಗ ಪುರಹರಸಂಗ ನೀಲಾಂಗ |
ಅಂಗದಪ್ರಿಯನಂಗಪಿತ ಕಾ-
ಳಿಂಗಮರ್ದನ ಅಮಿತ ಕರುಣಾ-
ಪಾಂಗ ಶ್ರೀನರಸಿಂಗ ರಕ್ಷಿಸು ನಮ್ಮ ನನವರತ ||೧೦||
ದಾಶರಥಿ ವೈಕುಂಠನಗರನಿ-
ವಾಸ ತ್ರೈಜಗದೀಶ ಪಾಪವಿ-
ನಾಶ ಪರಮವಿಲಾಸ ಹರಿ ಸರ್ವೇಶ ದೇವೇಶ |
ವಾಸುದೇವ ದಿನೇಶಶತಸಂ-
ಕಾಶ ಯದುಕುಲವಂಶತಿಲಕ ಪ-
ರಾಶರಾನತದೇವ ರಕ್ಷಿಸು ನಮ್ಮನನವರತ ||೧೧||
ಕುಂದಕುಟ್ಮಲರದನ ಪರಮಾ -
ನಂದ ಹರಿಗೋವಿಂದ ಸನಕಸ-
ನಂದವಂದಿತ ಸಿಂಧುಬಂಧನ ಮಂದರಾದ್ರಿಧರ |
ಇಂದಿರಾಪತಿ ವಿಜಯಸಖ ಅರ-
ವಿಂದನಾಭ ಪುರಂದರಾರ್ಚಿತ
ನಂದಕಂದ ಮುಕುಂದ ರಕ್ಷಿಸು ನಮ್ಮನನವರತ ||೧೨||
ಬಾಣಬಾಹುಚ್ಛೇದ ರಾವಣ-
ಪ್ರಾಣನಾಶನ ಪುಣ್ಯನಾಮ ಪು-
ರಾಣಪುರುಷೋತ್ತಮ ನಿಪುಣ ಅಣುರೇಣುಪರಿಪೂರ್ಣ |
ಕ್ಷೋಣಿಪತಿ ಸುಲಲಿತ ಸುದರ್ಶನ -
ಪಾಣಿ ಪಾಂಡವರಾಜಕಾರ್ಯಧು-
ರೀಣ ಜಗನಿರ್ಮಾಣ ರಕ್ಷಿಸು ನಮ್ಮನನವರತ ||೧೩||
ನೀಲವರ್ಣ ವಿಶಾಲಶುಭಗುಣ
ಶೀಲ ಮುನಿಕುಲಪಾಲ ಲಕ್ಷ್ಮೀ-
ಲೋಲ ರಿಪುಶಿಶುಪಾಲಮಸ್ತಕಶೂಲ ವನಮಾಲಾ |

ಮೂಲಕಾರಣ ವಿಮಲಯಾದವ-
ಜಾಲಹಿತ ಗೋಪಾಲ ಅಗಣಿತ-
ಲೀಲ ಕೋಮಲಕಾಯ ರಕ್ಷಿಸು ನಮ್ಮನನವರತ ॥ ೧೪ ॥
ನಾಗನಗರಿ ಧರಿತ್ರಿಕೋಶವಿ-
ಭಾಗ ತಂತ್ರನಿಯೋಗ ಗಮನಸ-
ರಾಗ ಪಾಂಡವರಾಜ ಜಿತಸಂಗ್ರಾಮ ನಿಸ್ಸೀಮ ।
ಯೋಗಗಮ್ಯ ಭವಾಬ್ಧಿ ವಿಷಧರ
ನಾಗ ಗಾರುಡಮಂತ್ರವಿಧ ಭವ-
ರೋಗವೈದ್ಯ ವಿಚಿತ್ರ ರಕ್ಷಿಸು ನಮ್ಮನನವರತ
ಶ್ರೀ ಮದುತ್ಸಹ ದೇವನುತ ಶ್ರೀ -
ರಾಮ ನಿನ್ನಯ ಚರಣಸೇವಕ
ಪ್ರೇಮದಿಂ ಸಾಷ್ಟಾಂಗವೆರಗುತೆ ಮಾಳ್ಪೆ ಬಿನ್ನಪವ ।
ಈ ಮಹಿಯೊಳೀವರೆಗೆ ನಾವ್ ಸು-
ಕ್ಷೇಮಿಗಳು ನಿನ್ನಯ ಪಾದಾಬ್ಜ-
ಕ್ಷೇಮವಾರ್ತೆಯನರುಹಿ ರಕ್ಷಿಸು ನಮ್ಮನನವರತ ॥
ಈಗಲೀ ಮರ್ಯಾದೆಯಲಿ ಶರ-
ಣಾಗತರ ಸೇವೆಯೊಳು ಹೊಂಪುಳಿ-
ಯಾಗಿ ಬಾಳುವರೇನು ಧನ್ಯರೊ ಹರಮಹಾದೇವ ।
ಭೋಗಭಾಗ್ಯವ ಬಯಸಿ ಮುಕ್ತಿಯ
ನೀಗಿ ನಿಮ್ಮನು ಭಜಿಸಲರಿಯದ
ಯೋಗಿಗಳ ಮಾತೇನು ರಕ್ಷಿಸು ನಮ್ಮನನವರತ ॥
ಭಕ್ತಿಸಾರದ ಚರಿತೆಯನು ಹರಿ-
ಭಕ್ತರಾಲಿಸುವಂತೆ ರಚಿಸುವೆ
ಯುಕ್ತಿಯಲಿ ಬರೆದೋದಿದವರಿಷ್ಟಾರ್ಥ ಸಿದ್ಧಿಪದು ।
ಮುಕ್ತಿಗಿದು ನೆಲೆದೋರುವುದು ಹರಿ-
ಭಕ್ತರನು ಲಾಲಿಪುದು ನಿಜಪತಿ
ಭಕ್ತಿ ಗೊಲಿವಂದದಲಿ ರಕ್ಷಿಸು ನಮ್ಮನನವರತ ॥
ನಳಿನಲೋಚನ ನಿಮ್ಮ ಮೂರ್ತಿಯ

ಕಳೆ ಬೆಳೆಗುತಿದೆ ಲಹರಿಯಲಿ
ಭೂತಳದೊಳಚ್ಚರಿಯಾದ ನಾಮಾಮೃತಸಮುದ್ರದಲಿ ।
ಬಳಸುವರು ಸತ್ಕವಿಗಳವರ-
ಗ್ಗಳಿತೆ ಎನಗಿನಿತಿಲ್ಲ ಸನ್ಮತಿ
ಗಳಿಗೆ ಮಂಗಳವಿತ್ತು ರಕ್ಷಿಸು ನಮ್ಮನನವರತ ॥
ಗಿಳಿಯಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದುನುಡಿ-
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ ।
ತಿಳುಹಿ ಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾಮಾ -
ವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ ॥
ಪೊಗಳಲಳವೇ ನಿನ್ನ ನಾಮವ
ಸುಗುಣಸಚ್ಚಾರಿತ್ರ ಕಥನವ-
ನಗಣಿತೋಪಮ ಅಮಿತವಿಕ್ರಮಗಮ್ಯ ನೀನೆಂದು ।
ನಿಗಮತತಿ ಕೈವಾರಿಸುತ ಪದ -
ಯುಗವ ಕಾಣದೆ ಬಳಲುತಿದೆ ವಾ-
ಸುಕಿಶಯನ ಸರ್ವೇಶ ರಕ್ಷಿಸು ನಮ್ಮನನವರತ ॥
ವೇದಶಾಸ್ತ್ರ ಪುರಾಣ ಪುಣ್ಯದ
ಹಾದಿಯನು ನಾನರಿಯೆ ತರ್ಕದ
ವಾದದಲಿ ಗುರುಹಿರಿಯರರಿಯದ ಮೂಢಮತಿ ಎನಗೆ ।
ಆದಿಮೂರುತಿ ನೀನು ನೆರೆ ಕರು-
ಣೋದಯನು ಹೃದಯಾಂಗಣದಿ ಜ್ಞಾ-
ನೋದಯವನೆನಗಿತ್ತು ರಕ್ಷಿಸು ನಮ್ಮನನವರತ ॥
ಹಸಿವರಿತು ತಾಯ್ತನ್ನ ಶಿಶುವಿಗೆ
ಒಸೆದು ಮೊಲೆಕೊಡುವಂತೆ ನೀ ಪೋ-
ಷಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರು ।
ಬಸಿರೊಳಗೆ ಬ್ರಹ್ಮಾಂಡಕೋಟಿಯ
ಪಸರಿಸಿದ ಪರಮಾತ್ಮ ನೀನೆಂ-

ದುಸುರುತಿವೆ ವೇದಗಳು ರಕ್ಷಿಸು ನಮ್ಮನನವರತ ||
ಇಬ್ಬರಣುಗರು ನಿನಗೆ ಅವರೊಳ-
ಗೊಬ್ಬಮಗನೀರೇಳುಲೋಕದ
ಹೆಬ್ಬಳಸು ಬೆಳವಂತೆ ಕಾರಣಕರ್ತನಾದವನು |
ಒಬ್ಬ ಮಗನದ ಬರೆವ ಕರಣಿಕ-
ರಿಬ್ಬರೀ ಲೋಕಪ್ರಸಿದ್ಧರು
ಹಬ್ಬಿಸಿದೆ ಪ್ರಾಣಿಗಳ ರಕ್ಷಿಸು ನಮ್ಮನನವರತ ||
ಸಿರಿಯು ಕುಲಸತಿ  ಸುತನು ಕಮಲಜ
ಹಿರಿಯಸೊಸೆ ಶಾರದೆ ಸಹೋದರಿ
ಗಿರಿಜೆ ಮೈದುನ ಶಂಕರನು ಸುರರೆಲ್ಲ ಕಿಂಕರರು |
ನಿರುತ ಮಾಯೆಯು ದಾಸಿ ನಿಜಮಂ-
ದಿರವಜಾಂಡವು ಜಂಗಮಸ್ಥಾ-
ವರ ಕುಟುಂಬಿಗ ನೀನು ರಕ್ಷಿಸು ನಮ್ಮನನವರತ ||
ಸಾಗರನ ಮಗಳರಿಯದಂತೆ ಸ-
ರಾಗದಲಿ ಸಂಚರಿಸುತಿಹೆ ಉ-
ದ್ಯೋಗವೇನು ನಿಮಿತ್ತಕಾರಣವೆಲ್ಲ ಲೋಕದಲಿ |
ಭಾಗವತರಾದವರ ಸಲಹುವ-
ನಾಗಿ ಸಂಚರಿಸುವುದು ಈ ಭವ-
ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತ ||
ಹಸ್ತಿವಾಹನನಾದಿಯಾದ ಸ-
ಮಸ್ತದೇವನಿಕಾಯದೊಳಗೆ ಪ್ರ-
ಶಸ್ತನಾವನು ನಿನ್ನವೊಲು ಶರಣಾಗತರ ಪೊರೆವ |
ಹಸ್ತಕಲಿತ ಸುದರ್ಶನದೊಳರಿ-
ಮಸ್ತಕವನಿಳುಹುವ ಪರಾತ್ಪರ
ವಸ್ತುವಲ್ಲವೆ ನೀನು ರಕ್ಷಿಸು ನಮ್ಮನನವರತ ||
ಹಗೆಯರಿಗೆ ವರವೀವರಿಬ್ಬರು
ತೆಗೆಯಲರಿಯರು ಕೊಟ್ಟ ವರಗಳ
ತೆಗೆದುಕೊಡುವ ಸಮರ್ಥರಾರೀ ಜಗಕೆ ನಿನ್ನಂತೆ |

ಸುಗುಣರಿನ್ನಾರುಂಟು ಕದನವ
ಬಗೆದು ನಿನ್ನೊಳು ಜೈಸುವವರೀ-
ಜಗದೊಳುಂಟೇ ದೇವ ರಕ್ಷಿಸು ನಮ್ಮನನವರತ ॥
ಸುಮನಸರ ವೈರದಲಿ ಕೆಲವರು
ಕುಮತಿಗಳು ತಪದಿಂದ ಭರ್ಗನ
ಕಮಲಜನ ಪದಯುಗವ ಮೆಚ್ಚಿಸಿ ವರವ ಪಡೆದಿಹರು ।
ಸಮರಮುಖದೊಳಗುಪಮೆಯಲಿ ವಿ-
ಕ್ರಮದಿ ವೈರವ ಮಾಡಿದವರಿಗೆ
ಅಮರಪದವಿಯನಿತ್ತೆ ರಕ್ಷಿಸು ನಮ್ಮನನವರತ ॥
ಬಲಿಯ ಬಂಧಿಸಿ ಮೊರೆಯಿಡುವ ಸತಿ-
ಗೊಲಿದು ಅಕ್ಷಯವಿತ್ತು ಕರುಣದಿ
ಮೊಲೆಯನುಣಿಸಿದ ಬಾಲಿಕೆಯ ಪಿಡಿದಸುವನಪಹರಿಸಿ ।
ಶಿಲೆಯ ಸತಿಯಳ ಮಾಡಿ ತ್ರಿಪುರದ
ಲಲನೆಯರ ವ್ರತಗೆಡಿಸಿ ಕೂಡಿದ
ಕೆಲಸ ಉತ್ತಮವಾಯ್ತು ರಕ್ಷಿಸು ನಮ್ಮನನವರತ ॥
ಕರಿಯ ಕಾಯ್ದಾಜಲದಿಮಕರಿಯ
ತರಿದು ಹಿರಣ್ಯಕನನ್ನು ಸೀಳ್ದಾ
ತರಳನನು ತಲೆಗಾಯ್ದು  ಶಕಟಾಸುರನ ಹತಮಾಡಿ ।
ದುರುಳ ಕಂಸನ ಕೊಂದು ಮಗಧನ
ಮುರಿದು ವತ್ಸನ ಹಮ್ಮಳಿಸಿ ಖರ-
ಹರಣವನು ಹಿಂಗಿಸಿದೆ ರಕ್ಷಿಸು ನಮ್ಮನನವರತ ॥
ಶಿಶುತನದ ಸಾಮರ್ಥ್ಯದಲಿ ಕೆಲ -
ರಸುರರನು ಸಂಹರಿಸಿ ಚಕ್ರವ
ಬಿಸುಟು  ಯೌವನಕಾಲದಲಿ ಆ ಪಾಂಡುಸುತರಿಂದ ।
ವಸುಮತಿಯ ಭಾರವನಿಳುಹಿ ಸಾ-
ಹಸದಿ ಮೆರೆದವನಾಗಿ ನೀ ಮೆ-
ಚ್ಚಿಸಿದೆ ತ್ರಿಜಗವನೆಲ್ಲ ರಕ್ಷಿಸು ನಮ್ಮನನವರತ ॥
ಎಲ್ಲರಲಿ ನೀನಾಗಿ ಸುಮನಸ-

ರಲ್ಲಿ ಅತಿಹಿತನಾಗಿ ಯಾದವ
ರಲ್ಲಿ ಬಾಂಧವನಾಗಿ ದಾನವರಲ್ಲಿ ಹಗೆಯಾಗಿ ।
ಕೊಲ್ಲಿಸಿದೆ ಭೀಮಾರ್ಜುನರ ಕೈ-
ಯಲ್ಲಿ ಕೌರವರ ಕುಲವನೆಲ್ಲವ
ಬಲ್ಲಿದನು ನೀನಹುದು ರಕ್ಷಿಸು ನಮ್ಮನನವರತ ॥
ನರಗೆ  ಸಾರಥಿಯಾಗಿ ರಣದೊಳು
ತುರಗ ನೀರಡಸಿದರೆ ವಾರಿಯ
ಸರಸಿಯನು ನಿರ್ಮಿಸಿ ಕಿರೀಟಿಯ ಕೈಲಿ ಸೈಂಧವನ ।
ಶಿರವ ಕೆಡಹಿಸಿ ಅವನ ತಂದೆಯ
ಕರತಲಕೆ ನೀಡಿಸಿದೆ ಹರಹರ
ಪರಮ ಸಾಹಸಿ ನೀನು ರಕ್ಷಿಸು ನಮ್ಮನನವರತ ॥
ಬವರದಲಿ ಖತಿಗೊಂಡು ಗದೆಯೊಳು
ಕವಿದು ನಿನ್ನ ಶ್ರುತಾಯುಧನು ಹೊ-
ಕ್ಕವಘಡಿಸಿ ಹೊಯ್ದಾಡಿ ತನ್ನಾಯುಧದಿ ತಾ ಮಡಿದ ।
ವಿವರವೇನೂ ತಿಳಿಯೆ ನೀ ಮಾ-
ಯವನು ನೀನೇ ಬಲ್ಲೆ  ನಿನ್ನಾ-
ಯವನು ಬಲ್ಲವರುಂಟೆ ರಕ್ಷಿಸು ನಮ್ಮನನವರತ ॥
ಇಳೆಗೆ ಪತಿಯಾದವನು ಯಾದವ-
ರೊಳಗೆ ಬಾಂಧವ ನಿನಗೆ ಸೋದರ
ದಳಿಯನಾದಭಿಮನ್ಯುವನು ಕೊಲ್ಲಿಸಿದೆ ಕೊಳುಗುಳದಿ ।
ಅಳಲಿನಬ್ಧಿಯೊಳದ್ದಿ ತಂಗಿಯ
ಬಳಲಿಸಿದೆ ಕುಲಗೋತ್ರ ಬಾಂಧವ -
ರೊಳಗೆ ಕೀರ್ತಿಯ ಪಡೆದೆ ರಕ್ಷಿಸು ನಮ್ಮನನವರತ ॥
ತಾಯನಗಲಿದ ತನಯನೀ ರಾ-
ಧೇಯನೊಳಗೆ ರಹಸ್ಯದಲಿ ಕುಲ -
ದಾಯವನು ನೆರೆ ತಿಳುಹಿ ಅರ್ಜುನನಿಂದ ಕೊಲ್ಲಿಸಿದೆ ।
ಮಾಯಮಂತ್ರದ ಕುಟಿಲಗುಣವ-
ನ್ಯಾಯವೋ ಸುನ್ಯಾಯವೋ ನಿ-

ನ್ನಾಯವನು ನೀ ಬಲ್ಲೆ ರಕ್ಷಿಸು ನಮ್ಮನನವರತ ॥
ಕೊಲ್ಲ ಬಗೆದವನಾಗಿ ನೀ ಹಗೆ-
ಯಲ್ಲಿ ಸಖ್ಯವ ಬೆಳೆಸಲದು ಹಿತ-
ವಲ್ಲ ನಿನ್ನಯ ಗುಣವ ಬಲ್ಲವರಿಲ್ಲ ಯದುಕುಲದಿ ।
ಗೊಲ್ಲನಾರಿಯರೊಳು ಪ್ರವರ್ತಕ-
ನಲ್ಲವೇ ಭಾವಿಸಲು ಲೊಕದೊ-
ಳೆಲ್ಲರೂ ಸರಿ ನಿನಗೆ ರಕ್ಷಿಸು ನಮ್ಮನನವರತ ॥
ಮಗನ ಕೊಂದವನಾಳುವಂತಹ
ಸುಗುಣೆಯರು ಹದಿನಾರು ಸಾವಿರ
ಸೊಗಸುಗಾತಿಯರವರ ಮೋಹದ ಬಲೆಗೆ ವಿಟನಾಗಿ ।
ಬಗೆಬಗೆಯ ರತಿಕಲೆಗಳಲಿ ಕೂ-
ರುಗುರ ನಾಟಿಸಿ ಮೆರೆದು ನೀ
ಜಗಕೆ ಪಾವನನಾದೆ ರಕ್ಷಿಸು ನಮ್ಮನನವರತ ॥
ಏನು ಮಾಡಿದಡೇನು ಕರ್ಮವ
ನೀನೊಲಿಯದಿನ್ನಿಲ್ಲ ವಿದಕನು-
ಮಾನವುಂಟೇ ಭ್ರಮರಕೀಟನ್ಯಾಯದಂದದಲಿ ।
ನೀನೊಲಿಯೆ ತೃಣ ಪರ್ವತವು ಪುಸಿ-
ಯೇನು ನೀ ಪತಿಕರಿಸೆ ಬಳಿಕಿ-
ನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತ ॥
ಎಷ್ಟು ಮಾಡಲು ಮುನ್ನ ತಾ ಪಡೆ-
ದಷ್ಟೆಯೆಂಬುದ ಲೋಕದೊಳು ಮತಿ-
ಗೆಟ್ಟ ಮಾನವರಾಡುತಿಹರಾಮಾತದಂತಿರಲಿ ।
ಪಟ್ಟವಾರಿಂದಾಯ್ತು ಧ್ರುವನಿಗೆ
ಕೊಟ್ಟ ವರ ತಪ್ಪಿತೇ ಕುಚೇಲನಿ-
ಗಿಷ್ಟಬಾಂಧವ ನೀನು ರಕ್ಷಿಸು ನಮ್ಮನನವರತ ॥
ತನ್ನ ದೇಹಾತುರದಲಡವಿಯೊ-
ಳನ್ಯರನು ಸಂಹರಿಸುತಿರುತಿರೆ
ನಿನ್ನ ನಾಮದೊಳಧಿಕವೆರಡಕ್ಷರವ ಬಣ್ಣಿಸುತ ।

ಧನ್ಯನಾದನು ಮುನಿಕುಲದಿ ಸಂ-
ಪನ್ನನಾದನು ನೀನೊಲಿದ ಬಳಿ-
ಕಿನ್ನು ಪಾತಕವುಂಟೆ ರಕ್ಷಿಸು ನಮ್ಮನನವರತ ॥
ನಿನ್ನ  ಸತಿಗಳುಪಿದ ದುರಾತ್ಮನ
ಬೆನ್ನಿನಲಿ  ಬಂದವನ ಕರುಣದಿ
ಮನ್ನಿಸಿದ ಕಾರಣ ದಯಾಪರಮೂರ್ತಿಯೆಂದೆನುತ ।
ನಿನ್ನ ಭಜಿಸಿದ ಸಾರ್ವಭೌಮರಿ-
ಗಿನ್ನು ಇಹಪರವುಂಟು ಸದ್ಗುಣ-
ರನ್ನ ಸಿರಿಸಂಪನ್ನ ರಕ್ಷಿಸು ನಮ್ಮನನವರತ ॥
ವೀರರಾವಣನೊಡನೆ ಹೋರಿದ
ವೀರರಗ್ಗದ ಕಪಿಗಳವರೊಳು
ಮಾರುತನ ಮಗನೇನು ಧನ್ಯನೊ ಬ್ರಹ್ಮಪಟ್ಟದಲಿ ।
ಸೇರಿಸಿದೆ ನಿನ್ನಂತೆ ಕೊಡುವ ಉ-
ದಾರಿಯಾವನು ತ್ರಿಜಗದೊಳಗಾ-
ಕಾರಣದಿ ನಂಬಿದೆನು ರಕ್ಷಿಸು ನಮ್ಮನನವರತ
ಶಿವಶಿವಾ ನೀ ಮಾಡಿದುಪಕಾ-
ರವನು ಮರೆದವರುಂಟೆ ಪಾಪದಿ
ನವೆದಜಾಮಿಳಗೊಲಿದು ಪ್ರಾಣವಿಯೋಗಕಾಲದಲಿ ।
ಜವನವರ ಕೈಗೊಪ್ಪಿಸದೆ ಕಾ-
ಯ್ದವನು ನೀ ಮಾಧವನು ಮಿಕ್ಕಾ-
ದವರಿಗುಂಟೇ ಕರುಣ ರಕ್ಷಿಸು ನಮ್ಮನನವರತ
ಹೆತ್ತ ಮಗಳನು ಮದುವೆಯಾದವ-
ವನುತ್ತಮನು ಗುರುಪತ್ನಿಗಳುಪಿದ
ಚಿತ್ತಜನ ಮಾವನು ಕೃತಘ್ನನು ನಿನಗೆ ಮೈದುನನು
ಹೊತ್ತು ತಪ್ಪಿಸಿ ಕಾಮದಲಿ ಮುನಿ
ಪೋತ್ತ ಮನ ಮಡದಿಯನು ನೆರದವ-
ಗಿತ್ತೆ ಕೈವಲ್ಯವನು ರಕ್ಷಿಸು ನಮ್ಮನನವರತ
ಇಲ್ಲಿಹನು  ಅಲ್ಲಿಲ್ಲವೆಂಬೀ-

ಸೊಲ್ಲು ಸಲ್ಲದು ಹೊರಗೊಳಗೆ ನೀ-
ನಿಲ್ಲದಿಲ್ಲನ್ಯತ್ರ್ಯವೆಂಬುದನೆಲ್ಲ ಕೆಲಕೆಲರು ।
ಬಲ್ಲರಿಳೆಯೊಳು ಭಾಗವತರಾ -
ದೆಲ್ಲರಿಗೆ ವಂದಿಸದ ಕುಜನರಿ-
ಗಿಲ್ಲ ಸದ್ಗತಿನೋಡಿ ರಕ್ಷಿಸು ನಮ್ಮನನವರತ ॥
ಸಿರಿಯ ಸಂಪತ್ತಿನಲಿ ನೀ ಮೈ
ಮರೆದು ಮದಗರ್ವದಲಿ ದೀನರ
ಕರುಣದಿಂದೀಕ್ಷಿಸದೆ ಕಡೆಗಣ್ಣಿಂದೆ ನೋಡುವರೆ ।
ಹರಹರ ಅನಾಥರನು ಪಾಲಿಸಿ
ವರವ ಕೊಡುವ ಉದಾರಿಯೆಂಬೀ
ಬಿರುದ ಬಿಡುವರೆ ತಂದೆ ರಕ್ಷಿಸು ನಮ್ಮನನವರತ ॥
ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ-
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು ।
ಏನ ಬಲ್ಲೆನು ನಾನು ನೆರೆ ಸು-
ಜ್ಞಾನಮೂರುತಿ ನೀನು ನಿನ್ನ ಸ-
ಮಾನರುಂಟೇ ದೇವ ರಕ್ಷಿಸು ನಮ್ಮನನವರತ ॥
ತರಳತನದಲಿ ಕೆಲವುದಿನ ದುರು-
ಭರದ ಗರ್ವದಿ ಕೆಲವುದಿನ ಮೈ-
ಮರೆದು ನಿಮ್ಮಡಿಗೆರಗದಾದೆನು ವಿಷಯಕೇಳಿಯಲಿ ।
ನರಕಭಾಜನನಾಗಿ ಕಾಮಾ -
ತುರದಿ ಪರಧನ ಪರಸತಿಗೆ ಮನ
ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತ ॥
ಮರೆದೆನಭ್ಯುದಯದಲಿ ನಿಮ್ಮನು
ಮರೆಯೆನಾಪತ್ತಿನಲಿ ಪೊರೆಯೆಂ-
ದೊರಲುವೆನು ಮನವೇಕಭಾವದೊಳಿಲ್ಲ ನಿಮ್ಮಡಿಯ ।
ಮರೆದು ಬಾಹಿರನಾದವನ ನೀ
ಮರೆವರೇ ಹಸು ತನ್ನ ಕಂದನ

ಮರೆವದೇ ಮಮತೆಯಲಿ ರಕ್ಷಿಸು ನಮ್ಮನನವರತ ॥
ಧಾರಿಣಿಗೆ ವರ ಚಕ್ರವರ್ತಿಗ-
ಳಾರು ಮಂದಿ ನೃಪಾಲಕರು ಹದಿ-
ನಾರು ಮಂದಿಯು ಧರಣಿಯನು ತಾವಾಳ್ದ ನೃಪರೆನಿತೋ ।
ವೀರರನು ಮೆಚ್ಚಿದಳೆ ಧರಣೀ
ನಾರಿ ಬಹು ಮೋಹದೊಳು ನಿನ್ನನು
ಸೇರಿ ಓಲೈಸುವಳು ರಕ್ಷಿಸು ನಮ್ಮನನವರತ ॥
ಭಾರಕರ್ತನು ನೀನು ಬಹು ಸಂ-
ಸಾರಿಯೆಂಬುದ ನಿಗಮತತಿ
ಕೈವಾರಿಸುತ್ತಿದೆ ದಿವಿಜ ಮನುಜ ಭುಜಂಗರೊಳಗಿನ್ನು ॥
ಆರಿಗುಂಟು ಸ್ವತಂತ್ರ ನಿನ್ನಂ-
ತಾರು ಮುಕ್ತಿಯನೀವ ಸದ್ಗುರು-
ವಾರು ಜಗದಧ್ಯಕ್ಷ ರಕ್ಷಿಸು ನಮ್ಮನನವರತ ॥
ಗತಿವಿಹೀನರಿಗಾರು ನೀನೇ
ಗತಿ ಕಣಾ ಪತಿಕರಿಸಿ ಕೊಡು ಸ-
ದ್ಗತಿಯ ನೀನೆಲೆ ದೇವ ನಿನಗಪರಾಧಿ ನಾನಲ್ಲ ।
ಶ್ರುತಿವಚನವಾಡುವದು ಶರಣಾ-
ಗತರ ಸೇವಕನೆಂದು ನಿನ್ನನು-
ಮತವಿಡಿದು ನಂಬಿದೆನು ರಕ್ಷಿಸು ನಮ್ಮನನವರತ ॥
ಈಗಲೋ ಈ ದೇಹವಿನ್ನಾ-
ವಾಗಲೋ ನಿಜವಲ್ಲವೆಂಬುದ-
ನೀಗ ತಿಳಿಯದೆ ಮಡದಿ ಮನೆ ಮನೆವಾರ್ತೆಯೆಂದೆನುತ ॥
ರಾಗಲೋಭದಿ ಮುಳುಗಿ ಮುಂದಣ
ತಾಗುಬಾಗುಗಳರಿಯೆ ನಿನ್ನ ಸ-
ಮಾಗಮವ ಬಯಸುವೆನು ರಕ್ಷಿಸು ನಮ್ಮನನವರತ ॥
ಮಾಂಸರಕ್ತದ ಮಡುವಿನಲಿ ನವ-
ಮಾಸ ಜನನಿಯ ಜಠರದೊಳಗಿರು-
ವಾ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು ।

ನೀ ಸಲಹಿದವನಲ್ಲವೇ ಕರು-
ಣಾಸಮುದ್ರನು ನೀನಿರಲು ಕಮ-
ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ ॥
ಬಲು ಮೃಗವು ಮರಪಕ್ಷಿ ಕೀಟಕ
ಜಲಚರೌಘದಿ ಜನಿಸಿದೆನು  ಕೋ-
ಟಲೆಗೊಳಿಸಬೇಡಕಟ ಮಾನವನಾದ ಬಳಿಕಿನ್ನು ।
ಕೊಲಿಸದಿರು ಯಮನಿಂದ ಮುರಹರ
ಒಲಿದು ನಿನ್ನನು ಭಜಿಸುವವರಿಗೆ
ಕೊಲೆಗೆ ಕಾರಣವೇನು ರಕ್ಷಿಸು ನಮ್ಮನನವರತ ॥
ಪಂಚಭೂತದ ಕಾಯದೊಳು ನೀ
ವಂಚಿಸದೆ ಇರುತಿರಲು ಪೂರ್ವದ
ಸಂಚಿತದ ಫಲವೆನ್ನಲೇಕಿದ ಮರುಳುತನದಿಂದ ।
ಮಿಂಚಿದವರಿನ್ನುಂಟೆ ತಿಳಿಯೆ ಪ್ರ-
ಪಂಚವೆಲ್ಲಕೆ ತಪ್ಪಿದವನೀ
ಕೊಂಚದವನೇ ಕೃಷ್ಣ ' ರಕ್ಷಿಸು ನಮ್ಮನನವರತ  ॥
ಹಲವು ಕರ್ಮಗಳಿಂದ ಮೂತ್ರದ
ಬಿಲಗಳಲಿ ಸಂಚರಿಸಿ ಪದವಿಯ
ಫಲವ ಕಾಣದೆ ಹೊಲಬು ತಪ್ಪಿದೆನೆನ್ನದೇಹದಲಿ ।
ಒಲಿದು ನೀನಿರೆ ನಿನ್ನ ಸಲುಗೆಯ
ಬಲುಮೆಯಲಿ ಬರಸೆಳೆವೆ ಮುಕ್ತಿಯ
ಲಲನೆಯನು ತಳುವಿಲ್ಲ ರಕ್ಷಿಸು ನಮ್ಮನನವರತ ॥
ಎತ್ತಿದೆನು ನಾನಾ ಶರೀರವ
ಹೊತ್ತು ಹೊತ್ತಲಸಿದೆನು ಸಲೆ ಬೇ-
ಸತ್ತು ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನು ।
ಸತ್ತು ಹುಟ್ಟುವ ಹುಟ್ಟಿ ಹಿಂಗುವ
ಸುತ್ತು ತೊಡಕನು ಮಾಣಿಸೆಲೆ ಪುರು-
ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತ ॥
ಇಂದು ಈ ಜನ್ಮದಲಿ ನೀನೇ

ಬಂಧು ಹಿಂದಣ ಜನ್ಮದಲಿ ಬಳಿ-
ಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲು ।
ಎಂದಿಗೂ ಎನಗಿಲ್ಲ ತನು ಸಂ-
ಬಂಧ ನಿನ್ನದು ಎನಗೆ ನೀ ಗತಿ
ಯೆಂದು ಬಿನ್ನೈಸಿದೆನು ರಕ್ಷಿಸು ನಮ್ಮನನವರತ ॥
ಗಣನೆಯಿಲ್ಲದೆ ಜನನಿಯರು ಮೊಲೆ-
ಯುಣಿಸಲಾ ಪಯಬಿಂದುಗಳನದ-
ನೆಣಿಸಲಳವೇ ಸಪ್ತಸಾಗರಕಧಿಕವೆನಿಸುವದು ।
ಬಣಗು ಕಮಲಜನದಕೆ ತಾನೇ
ಮಣಯಗಾರನು ಈತ ಮಾಡಿದ
ಕುಣಿಕೆಗಳ ನೀ ಬಿಡಿಸಿ ರಕ್ಷಿಸು ನಮ್ಮನನವರತ ॥
ಲೇಸ ಕಾಣೆನು ಜನನ ಮರಣದಿ
ಘಾಸಿಯಾದೆನು ನೊಂದೆನಕಟಾ-
ಲೇಸೆನಿಸಿ ನೋಡಲು ಪರಾತ್ಪರವಸ್ತು ನೀನಾಗಿ ।
ನೀ ಸಲಹುವವನಲ್ಲವೇ ಕರು-
ಣಾಸಮುದ್ರನು ನೀನಿರಲು
ಕಮಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ ॥
ಕಾಪುರುಷರೈದಾರುಮಂದಿ ಸ -
ಮೀಪದಲಿ ಕಾಡುವರು ಎನ್ನನು
ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ ।
ಶ್ರೀಪದಾಬ್ಜದ ಸೇವೆಯಲಿ ನೆರೆ-
ಪಾಪವನು ಪರಿಹರಿಸಿ ನೀ ನಿಜ-
ರೂಪಿನಲಿ ಬಂದೊಲಿದು ರಕ್ಷಿಸು ನಮ್ಮನನವರತ ॥
ಐದು ತತ್ತ್ವಗಳಾದ ಒಂದ-
ಕ್ಕೈದುಕಡೆಯಲಿ ತತ್ತ್ವ ಇಪ್ಪ -
ತ್ತೈದು ಕೂಡಿದ ತನುವಿನಲಿ ವಂಚಿಸದೆ ನೀನಿರಲು ।
ಭೇದಿಸದೆ ಜೀವಾತ್ಮತಾ ಸಂ-
ಪಾದಿಸಿದ ಸಂಚಿತ ಸುಕರ್ಮವ-

ನಾದರಿಸಿ ಕೈಕೊಂಡು ರಕ್ಷಿಸು ನಮ್ಮನನವರತ ॥
ಎಂಟುಗೇಣಿನ ದೇಹ ರೋಮಗ-
ಳೆಂಟು ಕೋಟಿಯು ಕೀಲ್ಗಳರವ-
ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು ।
ನೆಂಟ ನೀನಿರ್ದಗಲಿದೊಡೆ ಒಣ-
ಹೆಂಟೆಯಲಿ ಮುಚ್ಚುವರು ದೇಹದ-
ಲುಂಟೆ ಫಲಪುರುಷಾರ್ಥ ರಕ್ಷಿಸು ನಮ್ಮನನವರತ ॥
ಸ್ನಾನ ಸಂಧ್ಯಾ ಧ್ಯಾನ ಜಪ ತಪ
ದಾನಧರ್ಮ ಪರೋಪಕಾರ ವಿ-
ಹೀನಜನ್ಮವದಳಿವುದಲ್ಲದೆ ಬೇರೆ ಗತಿಯುಟೆ ।
ಏನು ಮಾಡಿದಡೇನು ಮುಕ್ತಿ-
ಜ್ಞಾನವಿಲ್ಲದೊಡಿಲ್ಲ ಭಕ್ತಿಗೆ
ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ ॥
ಕೋಪವೆಂಬದು ತನುವಿನಲಿ ನೆರೆ
ಪಾಪ ಪಾತಕದಿಂದ ನರಕದ
ಕೂಪದಲಿ ಮುಳುಗುವುದು ತಪ್ಪದು ಶಾಸ್ತ್ರಸಿದ್ಧವಲೇ ।
ರಾಪುಮಾಡದೆ ಬಿಡನು ಯಮನು ನಿ-
ರಾಪರಾಧಿಯು ನೋಡಿ ಕೀರ್ತಿಕ-
ಲಾಪವನು ನೀ ಕಾಯ್ದು ರಕ್ಷಿಸು ನಮ್ಮನನವರತ ॥
ನಿನ್ನ ಸೂತ್ರದೊಳಾಡುವವು ಚೈ-
ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವುವು ಹೂಹೆಗಳು ।
ಇನ್ನು ನಮಗೆ ಸ್ವಂತ್ರವೆಲ್ಲಿಯ-
ದನ್ಯಕರ್ಮ ಸುಕರ್ಮವೆಲ್ಲವು
ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ ॥
ಒಡೆಯ ನೀನೆಂದರಿತು ನಾ ನಿ-
ಮ್ಮಡಿಯ ಭಜಿಸದೆ ಮರುಳನಾದೆನು
ಮಡದಿಮಕ್ಕಳ ಮೋಹದಲಿ ಮನ ಸಿಲುಕುತಡಿಗಡಿಗೆ ।

ಮಡದಿಯಾರೀ ಮಕ್ಕಳಾರೀ
ಒಡಲಿಗೊಡೆಯನು ನೀನು ನೀ ಕೈ-
ಪಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ ॥
ಪಂಟಿಸಿದ ಮದಮುಖರು ಕೆಲಕೆಲ-
ರುಂಟು ರಿಪುಗಳು ದಂಟಿಸುತ ಬಲು
ಕಂಟಕದಿ ಕಾಡುವರು ಕಾಯ್ದೈ ಕಲುಷಸಂಹಾರ ।
ಬಂಟನಲ್ಲವೆ ನಾನು ದೀನರ
ನಂಟನಲ್ಲವೆ ನೀನು ನಿನ್ನೊಳ-
ಗುಂಟೆ ನಿರ್ದಯ ನೋಡಿ ರಕ್ಷಿಸು ನಮ್ಮನನವರತ ॥
ದಂಡಧರನುದ್ದಂಡ ಪಟಲತೆ
ಕೊಂಡು ಮೊರೆ ಹೊಗುವವರ ಕಾಣೆನು
ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸದ ।
ಖಂಡಪರಶುವು ರುದ್ರಭೂಮಿಯೊ-
ಳಂಡಲೆದು ತಿರುಗುವನು ನೀನು
ದ್ದಂಡ ದೇವರದೇವ ರಕ್ಷಿಸು ನಮ್ಮನನವರತ ॥
ಶಕ್ತಿಯೆಂಬುದು ಮಾಯೆ ಮಾಯಾ-
ಶಕ್ತಿಯದು ತನುವಿನಲ ನೀ ನಿಜ-
ಮುಕ್ತಿದಾಯಕನಿರಲು ಸುಖದುಃಖಾದಿಗಳಿಗಾರು ।
ಯುಕ್ತಿಯೊಳಗಿದನರಿತು ಮನದ ವಿ-
ರಕ್ತಿಯಲಿ ಭಜಿಸುವಗೆ ಮುಕ್ತಿಗೆ
ಭಕ್ತಿಯೇ ಕಾರಣವು ರಕ್ಷಿಸು ನಮ್ಮನನವರತ ॥
ಮೂರುಗುಣ ಮೊಳೆದೋರಿತದರೊಳು
ಮೂರು ಮೂರ್ತಿಗಳಾಗಿ ರಂಜಿಸಿ
ತೋರಿ ಸೃಷ್ಟಿಸ್ಥಿತಿಲಯಂಗಳ ರಚಿಸಿ ವಿಲಯದಲಿ ।
ಮೂರುರೂಪೊಂದಾಗಿ ಪ್ರಳಯದ
ವಾರಿಯಲಿ ವಟಪತ್ರಶಯನದಿ
ಸೇರಿದವ ನೀನೀಗ ರಕ್ಷಿಸು ನಮ್ಮನನವರತ ॥
ನೀರಮೇಲಣ ಗುಳ್ಳೆಯಂದದಿ

ತೋರಿಯಡಗುವ ದೇಹವೀ ಸಂ-
ಸಾರ ಬಹಳಾರ್ಣವದೊಳಗೆ ಮುಳುಗಿದೆನು ಪತಿಕರಿಸಿ ।
ತೋರಿಸಚಲಾನಂದಪದವಿಯ
ಸೇರಿಸಕಟಾ ನಿನ್ನವೊಲು ನಮ-
ಗಾರು ಬಾಂಧವರುಂಟು ರಕ್ಷಿಸು ನಮ್ಮನನವರತ ॥
ಹೊದ್ದಿನಿಲುವುದೆ ದರ್ಪಣದ ಮೇ-
ಲುದ್ದುರುಳಿ ಬೀಳ್ವಂತೆ ನಿಮಿಷದಿ
ಬಿದ್ದುಹೋಗುವ ಕಾಯವೀ ತನುವೆಂಬ ಪಾಶದಲಿ ।
ಬದ್ಧನಾದೆನು ಮಮತೆಯಲಿ ನೀ-
ನಿದ್ದುದಕೆ ಫಲವೇನು ಭಕ್ತಿ ವಿ-
ರುದ್ಧವಾಗದವೋಲು ರಕ್ಷಿಸು ನಮ್ಮನನವರತ ॥
ಕೇಳುವುದು ಕಡುಕಷ್ಟ ಕಷ್ಟದ
ಬಾಳುವೆಯ ಬದುಕೇನು ಸುಡು ಸುಡು
ಗಾಳಿಗೊಡ್ಡಿದ ಸೊಡರು ಈ ಸಂಸಾರದೇಳಿಗೆಯು ।
ಬಾಳಬೇಕೆಂಬವಗೆ ನೆರೆ ನಿ-
ಮ್ಮಾಳಿಗವ ಮಿಗೆ ಮಾಡಿ ಭಕ್ತಿಯೊ-
ಳಾಳಿ ಬದುಕುವುದುಚಿತ ರಕ್ಷಿಸು ನಮ್ಮನನವರತ ॥
ದೇಹಧಾರಕನಾಗಿ ಬಹುವಿಧ
ಮೋಹದೇಳಿಗೆಯಾಗಿ ಮುಕುತಿಗೆ
ಬಾಹಿರನು ತಾನಾಗಿ ವಿಷಯಾದಿಗಳಿಗೊಳಗಾಗಿ ।
ಹೇಯವೀ ಸಂಸಾರವೆನ್ನದೆ
ಮೋಹಿಸುವ ಮತಿಗೇಡಿ ಮಾನವ
ಸಾಹಸಿಯೆ ಸಟೆಮಾತು ರಕ್ಷಿಸು ನಮ್ಮನನವರತ ॥
ಅಳಿವ ಒಡಲನು ನೆಚ್ಚಿ ವಿಷಯಂ-
ಗಳಿಗೆ ಕಾತರನಾಗಿ ಮಿಗೆ ಕಳ-
ವಳಿಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೆ ।
ತಿಳಿದು ಮನದೊಳು ನಿನ್ನ ನಾಮಾ-
ವಳಿಯ ಜಿಹ್ವೆಗೆ ತಂದು ಪಾಪವ

ಕಳೆದು ಬಿಡುವುದು ಲೇಸು ರಕ್ಷಿಸು ನಮ್ಮನನವರತ ॥
ವರುಷ ನೂರಾಯುಷ್ಯವದರೊಳ-
ಗಿರುಳು ಕಳೆದೈವತ್ತ ನೈವ-
ತ್ತರಲಿ ವಾರ್ಧಿಕ ಬಾಲ್ಯ ಕೌಮಾರದಲಿ ಮೂವತ್ತು ।
ಇರದೆ ಸಂದದು ಬಳಿಕ ಇಪ್ಪ-
ತ್ತೊರುಷ ವದರೊಳಗಾದದಂತಃ-
ಕರಣ ನಿನ್ನೊಳು ತೋರಿ ರಕ್ಷಿಸು ನಮ್ಮನನವರತ ॥
ಊರು ತನಗೊಂದಿಲ್ಲ ಹೊತ್ತ ಶ-
ರೀರಗಳು ಮಿತಿಯಿಲ್ಲ ತಾ ಸಂ-
ಚಾರಿಸದ ನೆಲವಿಲ್ಲ ನುಡಿಯದ ಭಾಷೆ ಮತ್ತಿಲ್ಲ ।
ಬೇರೆ ಹೊಸತೊಂದಿಲ್ಲ ಉಣ್ಣದ
ಸಾರ ವಸ್ತುಗಳಿಲ್ಲ ತನು ಸಂ-
ಚಾರವೀ ಬಗೆಯಾಯ್ತು ರಕ್ಷಿಸು ನಮ್ಮನನವರತ ॥
ಗೋಪುರದ ಭಾರವನು ಗಾರೆಯ
ರೂಪು ದೋರಿದ ಪ್ರತಿಮೆಯಂದದಿ
ಈ ಪರಿಯ ಸಂಸಾರಭಾರವನಾರು ತಾಳುವರು ।
ತಾ ಪರಾಕ್ರಮಿಯೆಂದು ಮನುಜನು
ಕಾಪಥವ ನೈದುವನು ವಿಶ್ವ-
ವ್ಯಾಪಕನು ನೀನಹದು ರಕ್ಷಿಸು ನಮ್ಮನನವರತ ॥
ಬೀಜ ವೃಕ್ಷದೋಳಾಯ್ತು ವೃಕ್ಷಕೆ
ಬೀಜವಾರಿಂದಾಯ್ತು ಲೋಕದಿ
ಬೀಜವೃಕ್ಷನ್ಯಾಯವಿದ ಭೇದಿಸುವರಾರಿನ್ನು ।
ಸೋಜಿಗವ ನೀ ಬಲ್ಲೆ ನಿನ್ನೊಳು
ರಾಜಿಸುತ ಮೊಳೆದೋರುವುದು ಸುರ-
ರಾಜನಂದನನಮಿತ ರಕ್ಷಿಸು ನಮ್ಮನನವರತ ॥
ತೊಗಲು ಬೊಂಬೆಗಳಂತೆ ನಾಲಕು
ಬಗೆಯ ನಿರ್ಮಾಣದಲಿ ಇದರೊಳು
ನೆಗಳಿದೀ ಚೌಷಷ್ಟಿ ಲಕ್ಷಣಜಾತಿ ಧರ್ಮದಲಿ ।

ಬಗೆಬಗೆಯ ನಾಮಾಂಕಿತದ ಜೀ-
ವಿಗಳದೆಲ್ಲವು ನಿನ್ನ ನಾಮದಿ
ಜಗಕೆ ತೋರುತ್ತಿಹವು ರಕ್ಷಿಸು ನಮ್ಮನನವರತ ||
ಹೂಡಿದೆಲು ಮರಮುಟ್ಟು ಮಾಂಸದ
ಗೋಡೆ ಚರ್ಮದ ಹೊದಿಕೆ ನರಗಳ
ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮನಿರುತಿರಲು |
ಬೀಡು ತೊಲಗಿದ ಬಳಿಕಲಾ ಸುಡು-
ಗಾಡಿನಲಿ ಬೆಂದುರಿವ ಕೊಂಪೆಯ
ನೋಡಿ ನಂಬಿರಬಹದೆ ರಕ್ಷಿಸು ನಮ್ಮನನವರತ ||
ಬೀಗ ಮುದ್ರೆಗಳಿಲ್ಲದೂರಿಗೆ
ಬಾಗಿಲುಗಳೊಂಬತ್ತು ಹಗಲಿರು -
ಳಾಗಿ ಮುಚ್ಚದೆ ತೆರೆದಿಹದು ಜೀವಾತ್ಮ ತಾ ನಿರುತ |
ನೀಗಿ ಎಲ್ಲವ ಬಿಸುಟು ಬೇಗದಿ
ಹೋಗುತಿಹ ಸಮಯದಲಿ ಇವರವ-
ರಾಗಬಲ್ಲರೆ ನೀನೆ ರಕ್ಷಿಸು ನಮ್ಮನನವರತ ||
ಕೀಲು ಬಲಿದಿಹುದೈದು ತಿರುಗುವ
ಗಾಲಿ ಎರಡರ ರಥದಿ ತ್ರೈಗುಣ-
ಶೀಲನೋರ್ವನು ಸಂಚರಿಸುತಿಹನಾ ರಥಾಗ್ರದಲಿ |
ಕೀಲು ಕಡೆಗೊಂದೂಡಿ ಬೀಳಲು
ಕಾಲಗತಿ ತಪ್ಪುವದು ಆದರನು-
ಕೂಲ ನಿನ್ನೊಳಗಿಹದು ರಕ್ಷಿಸು ನಮನನವರತ ||
ಬಿಗಿದರಕುತದ ರೋಮಕೂಪದ
ತೊಗಲಕೋಟೆಯ ನಂಬಿ ರೋಗಾ -
ದಿಗಳ ಮುತ್ತಿಗೆ ಬಲಿದು ಜೀವನ ಪಿಡಿಯಲನುವಾಯ್ತು |
ವಿಗಡಯಮನಾಳುಗಳು ಬರುತಿರೆ
ತೆಗೆಸು ಕಾಲನ ಬಲದ ಬಲು ಮು-
ತ್ತಿಗೆಯನಿದ ಪರಿಹರಿಸಿ ರಕ್ಷಿಸು ನಮ್ಮನನವರತ ||
ವಾರಣಗಳೆಂಟೆಸೆವ ನಗರಕೆ

ದ್ವಾರ ಒಂಬತ್ತದಕೆ ಬಲು ಮೊನೆ-
ಗಾರರಾದಾಳುಗಳ ಕಾವಲುಗಾರರನು ಮಾಡಿ ।
ಆರರಿಯದಂತದರೊಳಗೆ ಹೃದ-
ಯಾರವಿಂದದಿ ನೀನಿರಲು ಬರಿ
ದೂರು ಜೀವನಿಗುಂಟೆ ರಕ್ಷಿಸು ನಮ್ಮನನವರತ ॥
ಪೇಳಲೆನ್ನಳವಲ್ಲವೀ ಯಮ-
ನಾಳುಗಳು ನೆರೆಯಂಗದೇಶವ
ದಾಳಿಮಾಡುವರಕಟಕಟ ಸೆರೆ ಸೂರೆಗಳ ಪಿಡಿದು ।
ಕಾಳು ಮಾಡುವರಿನ್ನು ತನುವಿದು
ಬಾಳಲರಿಯದು  ಕೋಟೆ ಅವರಿಗೆ
ಕೋಳು ಹೋಗದ ಮುನ್ನ ರಕ್ಷಿಸು ನಮ್ಮನನವರತ ॥
ನಾಲಿಗೆಯು ನಾಸಿಕವು ನಯನಕ-
ಪಾಲ ಪದ ಪಾಣಿಗಳು ತನುವಿನ
ಮೂಲ ಕರ್ತೃವಿನಲ್ಲಿ  ಪರಿಚಾರಕರು ತಾವಾಗಿ ।
ಲೀಲೆಯಿಂದಿರುತಿರ್ದು ಕಡೆಯಲಿ
ಕಾಲ ತೀರಿದ ಬಳಿಕಲದರನು-
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತ ॥
ಸತ್ತವರಿಗಳಲೇಕೆ  ತನ್ನನು
ಹೊತ್ತವರು ಹೆತ್ತವರುಗಳು ತಾವ್-
ಸತ್ತು ಹೋಗುವರಲ್ಲದುಳಿವರೆ ಮರುಗಲೇಕಿನ್ನು ।
ಮೃತ್ಯು ಬೆನ್ನಿನೊಳಿಹದು ತಾವಿ-
ನ್ನತ್ತು ಮಾಡುವುದೇನು ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ ॥
ಮಣ್ಣು ಮಣ್ಣಿನೊಳುದಿಸಲದರಲಿ
ಮಣ್ಣು ಬೊಂಬೆಗಳಾಗಿ ರಂಜಿಸಿ
ಮಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ ।
ಮಣ್ಣಿನಲಿ ಬಂಧಿಸಿದ ದೇಹವ
ಮಣ್ಣು ಕೂಡಿಸಬೇಡ ಜ್ಞಾನದ

ಕಣ್ಣು ದೃಷ್ಟಿಯನಿತ್ತು ರಕ್ಷಿಸು ನಮ್ಮನನವರತ ॥
ಬೀಯವಾಗುವ ತನುವಿನಲಿ ನಿ-
ರ್ದಾಯಕನು ನೀನಿರ್ದು ಅತಿಹಿರಿ-
ದಾಯಸಂ ಬಡಿಸುವರೆ ನೀನನುಕೂಲವಾಗಿರ್ದು ।
ತಾಯನಗಲಿದ ಶಿಶುವಿನಂದದಿ
ಬಾಯ ಬಿಡುವಂತಾಯ್ತಲೇ ಚಿಂ-
ತಾಯಕನೆ ಬಿಡಬೇಡ ರಕ್ಷಿಸು ನಮ್ಮನನವರತ ॥
ಮೊದಲು ಜನನವನರಿಯೆ ಮರಣದ
ಹದನ ಕಡೆಯಲಿ ತಿಳಿಯೆ ನಾ ಮ-
ಧ್ಯದಲಿ ನೆರೆ ನಾ ನಿಪುಣನೆಂಬದು ಬಳಿಕ ನಗೆಗೇಡು ।
ಮೊದಲು ಕಡೆ ಮಧ್ಯಗಳ ಬಲ್ಲವ
ಮದನಜನಕನು ನೀನು ನಿನ್ನಯ
ಪದಯುಗವ ಬಯಸುವೆನು ರಕ್ಷಿಸು ನಮ್ಮನನವರತ ॥
ಸಾರವಿಲ್ಲದ ದೇಹವಿದು ನಿ-
ಸ್ಸಾರವಾಗಿಹ ತನುವಿನಲಿ ಸಂ-
ಚಾರಿಯಹ ನೀನಿರ್ದು ಕಡೆಯಲಿ ತೊಲಗಿ ಹೋಗುತಲಿ ।
ದೂರ ತಪ್ಪಿಸಿಕೊಂಡು ಬರಿ ಯಪ-
ದೂರ ಹೊರಿಸಿದೆ ಜೀವನಲಿ ಇದ-
ನಾರು ಮೆಚ್ಚುವರಕಟ ರಕ್ಷಿಸು ನಮ್ಮನನವರತ ॥
ಅಂಡವೆರಡುದ್ಭವಿಸಿದವು ಬ್ರ-
ಹ್ಮಾಂಡವದರೋಪಾದಿಯಲಿ ಪಿಂ-
ಡಾಂಡವೆಸೆದುದು ಸ್ಥೂಲಕಾರಣ ಸೂಕ್ಷ್ಮತನುವಿನಲಿ ।
ಅಂಡ ನಿನ್ನಯ ರೋಮಕೂಪದೊ-
ಳಂಡಲಿದವಖಿಲಾಂಡವಿದು ಬ್ರ-
ಹ್ಮಾಂಡನಾಯಕ ನೀನು ರಕ್ಷಿಸು ನಮ್ಮನನವರತ ॥
ಒಂದು ದಿನ ತನುವಿನಲಿ ನಡೆವವು
ಇಂದು ಭಾಸ್ಕರ ಸ್ವರಗಳಿಪ್ಪ -
ತ್ತೊಂದು ಸಾವಿರದಾರನೂರನು ಏಳುಭಾಗದಲಿ ।

ಬಂದದನು ಉಡುಚಕ್ರದಲ್ಲಿಗೆ
ತಂದು ಧಾರೆಯನೆರೆದ ಮುನಿಕುಲ-
ವೃಂದಹೃದಯನು ನೀನು ರಕ್ಷಿಸು ನಮ್ಮನನವರತ ॥
ತೊಲಗುವರು ಕಡೆಕಡೆಗೆ ತಾ ಹೊಲೆ
ಹೊಲೆಯನುತ ಕಳವಳಿಸಿ ಮೂತ್ರದ
ಬಿಲದೊಳಗೆ ಬಂದಿಹುದ ಕಾಣದೆ ಬರಿದೆ ಮನನೊಂದು ।
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆಗೆಲಸ ವೀದೇಹದೊಳು ನೀ-
ನೆಲೆಸಿರಲು ಹೊಲೆಯುಂಟೆ ರಕ್ಷಿಸು ನಮ್ಮನನವರತ ॥

ಬರಿದಹಂಕಾರದಲಿ ತತ್ತ್ವದ
ಕುರುಹ ಕಾಣದೆ ನಿನ್ನ ದಾಸರ
ಜರೆದು ವೇದಪುರಾಣಶಾಸ್ತ್ರಗಳೋದಿ ಫಲವೇನು ।
ನರರು ದುಷ್ಕರ್ಮದಲಿ ಮಾಡಿದ
ದುರಿತವಡಗಲು ನಿನ್ನ ನಾಮ-
ಸ್ಮರಣೆಯೊಂದೇ ಸಾಕು ರಕ್ಷಿಸು ನಮ್ಮನನವರತ
ಎಂಜಲೆಂಜಲು ಎಂಬರಾನುಡಿ
ಎಂಜಲಲ್ಲವೆ ವಾರಿ ಜಲಚರ-
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನ್ನಿಸದೆ ।
ಎಂಜಲೆಲ್ಲಿಯದೆಲ್ಲಿಯುಂ ಪರ-
ರೆಂಜಲಲ್ಲವೆ ಬೇರೆ ಭಾವಿಸ-
ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ ॥
ಕೇಳುವದು ಹರಿಕಥೆಯ ಕೇಳಲು
ಹೇಳುವದು ಹರಿಭಕ್ತಿ ಮನದಲಿ
ತಾಳುವದು ಹಿರಿದಾಗಿ ನಿನ್ನಯ ಚರಣಸೇವೆಯಲಿ ।
ಊಳಿಗವ ಮಾಡುವದು ವಿಷಯವ
ಹೂಳುವದು ನಿಜಮುಕ್ತಿಕಾಂತೆಯ-
ನಾಳುವದು ಕೃಪೆಮಾಡಿ ರಕ್ಷಿಸು ನಮ್ಮನನವರತ ॥

ಈ ತೆರದೊಳಚ್ಯುತನ ನಾಮವ
ನೂತನದಿ ವಸುಧಾತಲದಿ ವಿ-
ಖ್ಯಾತಿಯಲಿ ಬಣ್ಣಿಸಿದೆ ಕನ್ನಡ ಕುಸುಮಷಟ್ಪದಿಯ ।
ನೀತಿಕೋವಿದರಾಲಿಸುವುದತಿ-
ಪ್ರೀತಿಯಲಿ ಕೇಳ್ದರಿಗೆ ಅಸುರಾ-
ರಾತಿ ಚೆನ್ನಿಗರಾಯ ಸುಖಗಳ ನೀವನನವರತ ॥
ಬಾದರಾಯಣ ಪೇಳ್ದ ಭಾರತ-
ಕಾದಿಕರ್ತನುದಾರ ಶ್ರೀಪುರ-
ದಾದಿಕೇಶವ ಮೂರ್ತಿಗಂಕಿತವಾದ ಚರಿತೆಯನು ।
ಮೇದಿನಿಯೊಳಿದನಾರು ಹೃದಯದೊ-
ಳಾದರಿಸಿ ಕೇಳ್ದಪರೊ ಮುದದಲಿ
ಆದಿಮೂರುತಿ ಸುರವರಾಧಿಪನೊಲಿವನನವರತ ॥
ಕುಲಗಿರಿಗಳನ್ವಯವು ಧಾರಿಣಿ
ಜಲಧಿ ಪಾವಕ ಮರುತ ಜಲ ನಭ
ಜಲಜಸಖ ಶೀತಾಂಶು ತಾರೆಗಳುಳ್ಳ ಪರಿಯಂತ ।
ಚಲನೆಯಿಲ್ಲದೆ ನಿನ್ನ ಚರಿತೆಯು
ಬಲಿದು ಧರೆಯೊಳಗೊಪ್ಪುವಂದದಿ
ಚೆಲುವ ಚೆನ್ನಿಗರಾಯ ರಕ್ಷಿಸು ನಮ್ಮನನವರತ ॥
ನೂರು ಕನ್ಯಾದಾನವನು ಭಾ-
ಗೀರಥೀ ಸ್ನಾನವನು ಮಿಗೆ ಕೈ-
ಯಾರೆ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದು ।
ಊರುಗಳ ನೂರಗ್ರಹಾರವ
ಧಾರೆಯೆರೆದಿತ್ತಂತೆ ಫಲ ಕೈ-
ಸೇರುವದು ಹರಿಭಕ್ತಿಸಾರದ ಕಥೆಯ ಕೇಳ್ದರಿಗೆ ॥
ಮೇರುಮಂದರನಿಭ ಸುವರ್ಣವ
ವಾರಿಮಧ್ಯದೊಳಿರುವ ಅವನಿಯ
ನಾರಿಯರ ಗಾಯತ್ರಿ ಪಶುಗಳನಿತ್ತ ಫಲಬಹುದು ।
ಧಾರಿಣಿಯೊಳೀ ಭಕ್ತಿಸಾರವ-

ನಾರು ಓದುವರವರಿಗನುದಿನ
ಚಾರುವರಗಳನಿತ್ತು ರಕ್ಷಿಪನಾದಿಕೇಶವನು ॥
ಲೋಕದೊಳಗತ್ಯಧಿಕವೆನಿಸುವ
ಕಾಗಿನೆಲೆ ಸಿರಿಯಾದಿಕೇಶವ
ತಾ ಕೃಪೆಯೊಳಗೆ ನುಡಿಸಿದನು ಈ ಭಕ್ತಿಸಾರವನು ।
ಜೋಕೆಯಲಿ ಬರಿದೋದಿ ಕೇಳ್ದರ-
ನಾಕುಲದಿ ಮಾಧವನು ಕರುಣಿಪ
ಶ್ರೀಕಮಲವಲ್ಲಭನು ಮಿಗೆ ಬಡದಾದಿಕೇಶವನು ॥
ಮಂಗಳಂ ಸರ್ವಾದಿಭೂತಗೆ
ಮಂಗಳಂ ಸರ್ವವನು ಪೊರೆವಗೆ
ಮಂಗಳಂ ತನ್ನೊಳಗೆ ಲೋಕವ ಲಯಿಸಿಕೊಂಬವಗೆ ।
ಮಂಗಳಂ ಸರ್ವಸ್ವತಂತ್ರಗೆ
ಮಂಗಳಂ ಸತ್ಯಸ್ವರೂಪಗೆ
ಮಂಗಳಂ ಸಿರಿಯೊಡೆಯ ಚೆನ್ನಿಗರಾಯ ಕೇಶವಗೆ ॥
ಮಂಗಳಂ ಜಗದಾದಿಮೂರ್ತಿಗೆ
ಮಂಗಳಂ ಜಯಪುಣ್ಯಕೀರ್ತಿಗೆ
ಮಂಗಳಂ ಕರತಲಿತಚಕ್ರ ವಿದಳಿತನಕ್ರನಿಗೆ ।
ಮಂಗಳಂ ದ್ರೌಪದಿಯ ಪೊರೆದಗೆ
ಮಂಗಳಂ ಧ್ರುವರಾಜಗೊಲಿದಗೆ
ಮಂಗಳಂ ಬೇಲೂರುಚೆನ್ನಿಗರಾಯ ಕೇಶವಗೆ
ಜಯ ಸುರೇಂದ್ರವರಾರ್ಚಿತಾಂಘ್ರಿಯೆ
ಜಯ ಪುರಾಧಿಪಸಂಸ್ತುತಾತ್ಮನೆ
ಜಯ ಮಹಾಮುನಿಯೋಗಗಮ್ಯನೆ ಮೇಘಮೇಚಕನೆ ।
ಜಯ ಜನಕಜಾಮುಖಾಬ್ಜಮಿತ್ರನೆ
ಜಯ ಕಲಾಧಿಪಸೂರ್ಯನೇತ್ರನೆ
ಜಯ ಜಯ ಜಗನ್ನಾಥದೇವನೆ ಚೆನ್ನಕೇಶವನೆ ॥

ಶ್ರೀ ಕನಕದಾಸಕೃತ ಹರಿಭಕ್ತಿಸಾರವು

ಸಂಪೂರ್ಣವಾದುದು ॥ ಶ್ರೀಮದ್ವೇಶಾಭಿನ್ನ ಶ್ರೀಕೃಷ್ಣಾರ್ಪಣಮಸ್ತು ॥